ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.79/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಲಕ್ಷ್ಮೀದೇವಿ** | | |
| **ಗಂಡನ ಹೆಸರು** | **ಯಂಕೋಬ** | **ಪಿಡಬ್ಲೂ:** | **3** |
| **ವಯಸ್ಸು** | **55 ವರ್ಷ** | **ಸಿಡಬ್ಲೂ:** | **3** |
| **ಉದ್ಯೋಗ:** | **ಗೃಹಿಣಿ** | | |
| **ವಾಸ ಸ್ಥಳ:** | **ಸೋಮಲಾಪುರ.** | | |

**ದಿನಾಂಕ 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಚಾಸಾ-1 ನನ್ನ ಅಣ್ಣ. ಚಾಸಾ-2 ನನ್ನ ಸೊಸೆ. ಚಾಸಾ-4 ನನ್ನ ಗಂಡ. ಚಾಸಾ-5 ರಿಂದ 8 ನನ್ನ ಗ್ರಾಮಸ್ಥರು. ಆರೋಪಿತರ ಪರಿಚಯ ಇದೆ.

ದಿ.04-11-2022 ರಂದು ಮಧ್ಯಾಹ್ನ 12-10 ನಿಮಿಷಕ್ಕೆ ಚಾಸಾ-1 ರವರು ತಮ್ಮ ಹೊಲಕ್ಕೆ ನೀರು ಹರಿಸಿಕೊಳ್ಳಲು ಚಾಸಾ-7 ರವರ ಬಳಿ ಹೋಗಿ ಕೇಳಿ, ಹೊಲಕ್ಕೆ ನೀರು ಹರಿಸಿಕೊಳ್ಳಲು ಹೋಗಿದ್ದರು. ಆಗ ಆರೋಪಿತರು ಬಂದು ನಮ್ಮನ್ನು ಕೇಳದೇ ನೀವು ನೀರನ್ನು ಹೇಗೆ ಹರಿಸಿಕೊಂಡಿರಿ ಸೂಳೆ ಮಕ್ಕಳೇ ಎಂದು ಬೈದರು. ನಂತರ ಆರೋಪಿತರು ಚಾಸಾ-1 ರವರಿಗೆ ಹೊಡೆದರು. 2 & 3 ನೇ ಆರೋಪಿತರ ಚಾಸಾ-1 ರವರ ಎದೆಗೆ ಕಲ್ಲಿನಿಂದ ಹೊಡೆದರು. 1 & 4 ನೇ ಆರೋಪಿತರು ಚಾಸಾ-1 ರವರ ಬೆನ್ನಿಗೆ ಹೊಡೆದರು ಮತ್ತು ಮುಖಕ್ಕೆ ಚೂರಿರುತ್ತಾರೆ. ಬಿಡಿಸಲು ಹೋದಾ ಚಾಸಾ-2 ರವರಿಗೂ ಸಹ ಕೈಗಳಿಂದ ಹೊಡೆದರು ಮತ್ತು ನನಗೂ ಸಹ 3 ನೇ ಆರೋಪಿ ನನ್ನ ಸೀರೆ ಹಿಡಿದು ಎಳೆದಾಡಿ ಮುಖಕ್ಕೆ ಹೊಡೆದರು. 1 ನೇ ಆರೋಪಿ ಬಿಡಿಸಲು ಬಂದ ಚಾಸಾ-2 ರವರಿಗೆ ಕೈಯಿಂದ ಕಪಾಳಕ್ಕೆ

ಹೊಡೆದರು. ನಂತರ ಬಿಡಿಸಲು ಹೋದಾ ಚಾಸಾ-4 ರವರಿಗೆ 3 ನೇ ಆರೋಪಿಯು ಹೊಡೆದಿರುತ್ತಾನೆ. ಘಟನೆಯಲ್ಲಿ ನನ್ನ ಕಿವಿಯೋಲೆ & ಚೈನ್ ಸರ ಕಳೆದಿತ್ತು, ನಂತರ ಸಿಕ್ಕಿತ್ತು. ನಂತರ ಚಾಸಾ-7 & 8 ರವರು ಜಗಳ ಬಿಡಿಸಿದ್ದರು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಮತ್ತು ಮು. ಮಾ. 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಆರೋಪಿತರು ಇನ್ನೊಂದು ಸಲ ಮೋಟರ್ ನ ತಂಟೆಗೆ ಬಂದರೆ ನಿಮ್ಮನ್ನು ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿದ್ದರು ಎಂದರೆ ಸರಿ.

**ಪಾಟೀಸವಾಲುಃ ಶ್ರೀ.ಎಸ್. ವಿ. ಪಿ. ಆರೋಪಿ ಪರ ವಕೀಲರಿಂದಃ**

1. ಪೋಲೀಸರು ನನ್ನನ್ನು ವಿಚಾರಣೆ ಮಾಡಿದ ದಿನಾಂಕವನ್ನು ಹೇಳಲು ಆಗುವುದಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿ. ವೀರೇಶ್ ರವರ ಹೊಲವನ್ನು 1 ನೇ ಆರೋಪಿ ಗುತ್ತಿಗೆಗೆ ಮಾಡುತ್ತಿದ್ದ ಎಂದರೆ ಸರಿ.

2. ಚಾಸಾ-1 ರವರು ಶಂಕ್ರಯ್ಯಸ್ವಾಮಿ ರವರ ಹೊಲವನ್ನು 2-3 ವರ್ಷಗಳಿಂದ ಗುತ್ತಿಗೆಗೆ ಮಾಡುತ್ತಿದ್ದರು. ಅದರ ಸರ್ವೆ ನಂಬರನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ಆ ಸಂಬಂಧ ಅಗ್ರಿಮೆಂಟ್ ಬರೆದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

3. ಚಾಸಾ-1 ರವರು ಯಾವ ದಿನಾಂಕದಂದು ವೀರೇಶ್ ರವರನ್ನು ನೀರು ಕೇಳಲು ಹೋಗಿದ್ದು ಎಂದರೆ ಸಾಕ್ಷಿಯು ದಿ.04-11-2022 ರಂದು ಮಧ್ಯಾಹ್ನ 12-10 ಗಂಟೆ ಆಗಿತ್ತು ಎನ್ನುತ್ತಾರೆ. ಚಾಸಾ-1 ರವರು ವೀರೇಶ್ ರವರನ್ನು ಹೊಲದಲ್ಲಿ ನೀರು ಕೇಳಿದ್ದರು. 1 ನೇ ಆರೋಪಿಯ ಬಳಿ ನೀರು ಕೇಳಿರುವುದಿಲ್ಲ.

4. ಬೇರೆಯವರು ಲೀಜ್ ಮಾಡುವ ಹೊಲದಲ್ಲಿ ಅವರ ಅನುಮತಿ ಇಲ್ಲದೇ, ಅವರ ಹೊಲಕ್ಕೆ ಹೋಗುವುದಾಗಲೀ, ಮೋಟಾರ್ ಶುರುಮಾಡಿಕೊಂಡು ನೀರು ಹರಿಸಿಕೊಳ್ಳುವುದು ಕಾನೂನು ರೀತ್ಯ ಅಪರಾಧ ಎಂದರೆ ಸರಿ.

5. ಚಾಸಾ-1 ರವರು ಲೀಜ್ ಮಾಡುವ ಹೊಲದ ಪಕ್ಕದಲ್ಲಿ ಅವರ ಸ್ವಂತ ಹೊಲ ಇದೆ ಎಂದರೆ ಸರಿ. ಆ ಹೊಲಕ್ಕೆ ಚಾಸಾ-1 ರವರು ಸ್ವಂತ ಬೋರ್ ಹಾಕಿಸಿದ್ದರು ಎಂದರೆ ಸರಿ. ಸದರಿ ಎರಡು ಹೊಲಗಳಿಗೆ ಕೆನಾಲ್ ಮೂಲಕ ನೀರು ಹರಿಯುತ್ತದೆ ಎಂದರೆ ಸರಿ. ಚಾಸಾ-1 ತನ್ನ ಸ್ವಂತ ಹೊಲಕ್ಕೆ ಕೆನಾಲ್ ಮತ್ತು ಬೋರ್ ನೀರು ಸಾಕಾಗುತ್ತದೆ ಎಂದರೆ ಸಾಕ್ಷಿಯು ಸ್ವಂತ ಹೊಲಕ್ಕೆ ಸಾಕಾಗುವುದಿಲ್ಲ ಎನ್ನುತ್ತಾರೆ. ಸ್ವಂತ ಹೊಲಕ್ಕೆ ಕಾಲುವೆ ನೀರು ಮತ್ತು ಬೋರ್ ನೀರು ಇರುವುದರಿಂದ ಗುತ್ತಿಗೆಯ ಹೊಲಕ್ಕೆ ನೀರು ಹರಿಸಿಕೊಳ್ಳುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ.

6. ನೀವು ಮತ್ತು ಆರೋಪಿತರು ಬೀಗರು ಎಂದರೆ ಸರಿ. ನಿಮ್ಮ ಮತ್ತು ಅವರ ನಡುವೆ ವೈಮನಸ್ಸು ಇದೆ ಎಂದರೆ ಸಾಕ್ಷಿಯು ಮೊದಲು ಆ ರೀತಿ ಇರಲಿಲ್ಲ, ಇತ್ತೀಚೆಗೆ ಹೀಗೆ ಆಗಿದೆ ಎನ್ನುತ್ತಾರೆ. ನಿಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಸು ಇರುವುದರಿಂದ ನೀವು ಮತ್ತು ಚಾಸಾ-1 ರವರು ಸೇರಿಕೊಂಡು ಸುಳ್ಳು ದೂರನ್ನು ಆರೋಪಿತರ ವಿರುದ್ಧ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

7. 1ನೇ ಆರೋಪಿ ಗುತ್ತಿಗೆ ಮಾಡುತ್ತಿದ್ದ ಹೊಲವನ್ನು ಈ ರೀತಿ ಸುಳ್ಳು ಕೇಸು ಕೊಟ್ಟರೆ ಬಿಡಿಸಬಹುದು ಎಂದು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

8. ನಿಮ್ಮೂರಿನ ಬಳಿ ಇರುವ ಅಂಬಾಮಠದ ಗುಡ್ಡದಲ್ಲಿ ಕಂಕರ್ ಮಿಷನ್ ಹೊಡೆಯುತ್ತಾರೆ ಎಂದರೆ ಸರಿ. ಮು. ಮಾ. 1 ರಿಂದ 3 ಕಂಕರ್ ಮಿಷನ್ ಕಲ್ಲುಗಳು ಎಂದರೆ ಸಾಕ್ಷಿಯು ಇವುಗಳು ಅಲ್ಲಿಯೇ ರೋಡಿನಲ್ಲಿ ಇದ್ದವು ಎನ್ನುತ್ತಾರೆ. ಚಾಸಾ-1 ರವರ ಮೈಕೈಗೆ ಗಾಯಗಳಾಗಿದ್ದವು. ಸ್ವಲ್ಪ ರಕ್ತ ಹರಿಯುತ್ತಿತ್ತು ಮತ್ತು ಮೂಕಪೆಟ್ಟುಗಳಾಗಿದ್ದವು. ರಕ್ತ ಅಂಗಿಗೆ ಹತ್ತಿತ್ತು. ಆ ಅಂಗಿಯನ್ನು ಚಾಸಾ-1 ಪೋಲೀಸರಿಗೆ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ರಕ್ತ ಹತ್ತಿದ ಅಂಗಿಯನ್ನು ಪೋಲೀಸರು ಕೇಳಿರಲಿಲ್ಲ. ಮು. ಮಾ.1 ರಿಂದ 3 ರ ಮೇಲೆ ರಕ್ತ ಹತ್ತಿಲ್ಲ.

9. ನನ್ನ ಸೀರೆ ಮತ್ತು ಕುಪ್ಪಸ ಹರಿದಿರಲಿಲ್ಲ. 3ನೇ ಆರೋಪಿ ಮುಖಕ್ಕೆ ಹೊಡೆದಿಲ್ಲ, ಸೀರೆ ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸ-1 ರವರ ಬೆನ್ನಿಗೆ ಗುದ್ದಿಲ್ಲ, ಕಲ್ಲಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. 4ನೇ ಆರೋಪಿ ಚಾಸಾ-5 ರವರ ಮುಖಕ್ಕೆ ಚೂರಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾಸಾ-4 ರವರ ಮುಖಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ.

10. ಶಂಕ್ರಯ್ಯ ಮತ್ತು ವೀರೇಶ್ ರವರ ಹೊಲದ ಹತ್ತಿರ ಚಾಸಾ-7 ರವರ ಹೊಲ ಬರುವುದಿಲ್ಲ. ನಾನುಹೇಳುವಂತೆ ಯಾವುದೇ ಘಟನೆ ನಡೆದಿಲ್ಲ, ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ, ಹೊಡೆ ಬಡೆ ಮಾಡಿಲ್ಲ, ಚೂರಿಲ್ಲ, ಕಲ್ಲಿನಿಂದ ಹೊಡೆದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ.

11. ನನ್ನ ಕಿವಿಯ ಬುಗುಡಿ ಕಡ್ಡಿ ಮತ್ತು ಚಾಸಾ-1 ರವರ ಚೈನನ್ನು ಪೋಲಿಸರು ಕೇಳಿಲ್ಲ, ನಾನು ಪೋಲೀಸರಿಗೆ ಕೊಟ್ಟಿರುವುದಿಲ್ಲ. ನೀವು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-7 & 8 ರವರು ಜಗಳ ಬಿಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**